ವಿವಿಧ ಇಲಾಖೆಗಳಲ್ಲಿ ಸಲಹಾಸಮಿತಿಗಳ ರಚನೆ

263 (797) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.–

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).–

ಅ) ಕಳೆದ ವರ್ಷ ವಿವಿಧ ಮಂತ್ರಿಗಳಿಗೆ ಸಂಬಂಧಿಸಿದಂತೆ ಸಲಹಾ ಸಮಿತಿಗಳನ್ನು ರಚಿಸಲಾಗಿದ್ದುದು ನಿಜವೆ ;

ಆ) ಹಾಗಿದ್ದಲ್ಲಿ ಅವು ಹೇಗೆ ಕೆಲಸ ಮಾಡುತ್ತಿವೆ, ಮತ್ತು ಮಂತ್ರಿಗಳು ಅವುಗಳ ಸದುಪಯೋಗ ಪಡೆದುಕೊಂಡಿರುವರೆ ?

ಆ) ಇಲ್ಲ. ಸಲಹಾ ಸಮಿತಿಗಳನ್ನು ರಚಿಸಿಲ್ಲ. ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ''ಕನ್ಸಲ್ಟೇಟಿವ್ ಕಮಿಟಿಗಳನ್ನು'' ಪುನರ್‌ರ್ಚಿಸಲಾಗಿದೆ.

ಆ) ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ಹೌದು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳಿಂದ ಅನುಮೋದಿಸಲ್ಪಟ್ಟಿದೆ.

ಶ್ರೀ ಎಂ. ಆನಂದರಾವ್.—ಸಭಾಧ್ಯಕ್ಷರೇ, ಹೋದ ವರ್ಷ ಈ ಸಲಹಾ ಸಮಿತಿಗಳ ಬಗ್ಗೆ ಪತ್ರಿಕೆಯಲ್ಲಿ ಬಹಳ ಪ್ರಚಾರವಾಗಿತ್ತು. ಇದರಲ್ಲಿ ಬಹುಶಃ ಸಲಹಾ ಸಮಿತಿಗೂ ಕನ್ಸಲ್ಟೇಟೀವ್ ಕಮಿಟಿಗೂ ವ್ಯತ್ಯಾಸ ಇದೆಯೇ ಎಂದು ಕಾಣುತ್ತದೆ. ಆದರೆ ಯಾವ ಸಮಿತಿ ಸಭೆಯನ್ನು ಕರೆದಿರಲಿಲ್ಲ. ಈ ಸಮಿತಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೆಂದು ಹೇಳಿದ್ದೀರಿ ನನ್ನನ್ನು ವರ್ಕ್ಸ್ ಕಮಿಟಿಗೆ ತೆಗೆದುಕೊಂಡಿದ್ದೀರಿ. ಆದರೆ ನಾನು ಮೀಟಿಂಗಿಗೆ ಹೋದಾಗ ಸಂಬಂಧಪಟ್ಟ ಮಂತ್ರಿಗಳು I have no agenda, you must give one agenda ಎಂದು ಹೇಳಿದರು. ಅನಂತರ ಟೀ ತರಿಸಿದರು, ಟೀ ಕುಡಿದೆ. "wish you good luck" ಎಂದು ಹೇಳಿದರು, ಇದೇ ರೀತಿ ಎಲ್ಲಾ ಕಡೆ ನಡೆಯುತ್ತಿದೆಯೇ ಎಂದು ನಾನು ಕೇಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಕನ್ಸಲ್ಟೇಟೀವ್ ಕಮಿಟಿ ಎಂದು ಮಾಡಿದ್ದೇವೆ. ಹಿಂದೆ ಈ ಒಂದು ಸರ್ಕಾರದ ಆದೇಶ ಇತ್ತು. ಹಿಂದಿನ ಸರ್ಕಾರವೂ ಕೂಡಾ ಇದೇ ರೀತಿ ವ್ಯವಸ್ಥೆ ಮಾಡಿದ್ದರು. ಆದನ್ನೇ ಈಗ ಮುಂದುವರಿಸಿಕೊಂಡು ಜೂನ್ ತಿಂಗಳಿನಲ್ಲಿ ಈ ಸಲಹಾ ಸಮಿತಿಗಳನ್ನು ಪುನರ್ ರ್ಚಿಸಲಾಗಿದೆ. ಮತ್ತು ಆಯಾಯಾ ಮಂತ್ರಿಗಳಿಗೆ ಆಯಾಯಾ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯನ್ನು ಕರೆಸಬೇಕಾಗಿದೆ. ಅಸೆಂಬ್ಲಿ ಸಭೆ ಸೇರಿತಕ್ಕಂಥ ಸಮಯದಲ್ಲಿ ಒಂದು ಸಲವೂ ಸೇರದೆ ಇರತಕ್ಕ ಸಮಯದಲ್ಲಿ ಒಂದು ಸಲ ಸೇರಬೇಕು ಎಂದು ನಿಯಮವಿದೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ 1983ರಲ್ಲಿ ಎರಡು ಸಲ ಕರೆದಿದ್ದೇನೆ. ಮಾನ್ಯ ಸದಸ್ಯರು ಸಭೆಗೆ ಹಾಜರು ಇದ್ದರು. ಬೇರೆ ಕಡೆ ಸಭೆ ನಡೆಯಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ನಾನು ಇದನ್ನು ವಿಚಾರಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ನಂಜನಗೂಡ್ ಪಟ್ಟಣಕ್ಕೆ 30 ಹಾಸಿಗೆಯ ಆಸ್ಪತ್ರೆಯು ಮಂಜೂರಾತಿ

265 (810) ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ನಂಜನಗೂಡು ಪಟ್ಟಣಕ್ಕೆ 30 ಹಾಸಿಗೆಗಳುಳ್ಳ ಸರಕಾರಿ ಆಸ್ಪತ್ರೆಯನ್ನು ಯಾವಾಗ ಮಂಜೂರು ಮಾಡಲಾಯಿತು ;

ಆ) ಇದಕ್ಕೆ ಬೇಕಾದ ಜಮೀನನ್ನು ಈಗಾಗಲೆ ಸ್ವಾಧೀನ ಪಡಿಸಿಕೊಳ್ಳಲಾಗಿದೆಯೆ ಮತ್ತು ಈ ಆಸ್ಪತ್ರೆಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಸರ್ಕಾರಿ ಆಜ್ಞೆ ಎಚ್. ಎಫ್. ಡಬ್ಲ್ಯೂ 480 ಸಿ. ಜಿ. ಎಂ 80 ದಿನಾಂಕ-25-11-80 ರಲ್ಲಿ ಮಂಜೂರು ಮಾಡಲಾಗಿದೆ

ಆ) ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಕಟ್ಟಡದ ಕೆಲಸ ಮುಗಿದ ಕೂಡಲೇ ಆಸ್ಪತ್ರೆಯನ್ನು ಪ್ರಾರಂಭಿಸಲಾಗುವುದು?

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ಈ ಆಸ್ಪತ್ರೆ 1980ನೇ ಇಸವಿಯಲ್ಲಿ ಮಂಜೂರಾಗಿದೆ.